157_72_132

ಕರ್ನಾಟಕ ವಿಧಾನ ಪರಿಷತ್ತು ಮಾನ್ಯ ಸದಸ್ಯರಾದ ಡಾ. ಯತೀಂದ್ರ ಎಸ್. ಇವರು ನಿಯಮ72ರಡಿ ಮಂಡಿಸಿರುವ ಸೂಚನೆಗೆ ಉತ್ತರ.

**ಸೂಚನೆ:**

ರಾಜ್ಯದಲ್ಲಿ ತಹಶೀಲ್ದಾರ್ ಗ್ರೇಡ್-1 ಮತ್ತು ತಹಶೀಲ್ದಾರ್ ಗ್ರೇಡ್ -2 ಹುದ್ದೆಗಳು ಬಹಳಷ್ಟು ಖಾಲಿ ಇದ್ದರೂ ಸಹ ಕಳೆದ 3 ವರ್ಷಗಳಿಂದ ಪದೋನ್ನತಿ ನೀಡದೆ ವಿಳಂಬವಾಗಿರುತ್ತದೆ, ಇದರಿಂದ ಹಲವು ಅಧಿಕಾರಿಗಳು ಅರ್ಹತೆಯಿದ್ದರೂ ಸಹ ಪದೋನ್ನತಿ ಪಡೆಯದೆ ವಂಚಿತರಾಗಿದ್ದು, ಈ ಬಗ್ಗೆ ಶೀಘ್ರವಾಗಿ ಕ್ರಮ ವಹಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಉತ್ತರ:**

ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 10669-10676/2021 ಮತ್ತು ಅರ್ಜಿ ಸಂಖ್ಯೆ:10691-10698/2021 ದಿನಾಂಕ:23.12.2022ರ ಆದೇಶ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಅರ್ಜಿ : 103880/2023 ದಿನಾಂಕ:26.09.2023ರ ಆದೇಶ, ಮಾನ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ : ರಿವ್ಯೂ ಪಿಟಿಷನ್ ಅರ್ಜಿ ಸಂಖ್ಯೆ: 2007- 2035/2023 ದಿನಾಂಕ:04.12.2023 ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 103456-457/2024 ಹಾಗೂ 107924/2024 ದಿನಾಂಕ:25.07.2024ರ ಆದೇಶಗಳನ್ವಯ, ದಿನಾಂಕ:25.06.2021 ರಂದು ಪ್ರಕಟಿಸಲಾಗಿದ್ದ ಸ್ಥಳೀಯ ವೃಂದದ ತಹಶೀಲ್ದಾರ್ ಗ್ರೇಡ್- 2 ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:02.06.2026ರಂದು ಪ್ರಕಟಿಸಲಾಗಿರುತ್ತದೆ.

ಮೇಲ್ಕಂಡ ದಿನಾಂಕ: 25.06.2021ರ ಕಲ್ಯಾಣ ಕರ್ನಾಟಕ ತಹಶೀಲ್ದಾರ್ ಗ್ರೇಡ್- 2 ವೃಂದದ ಜೇಷ್ಠತಾ ಪಟ್ಟಿಯನ್ನು ಮಾನ್ಯ ಕೆ.ಎ.ಟಿ ಮತ್ತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಗಳನ್ವಯ ಪರಿಷ್ಕರಿಸಿರುವುದರಿಂದ, ತಹಶೀಲ್ದಾರ್ ಗ್ರೇಡ್-2 ಕಲ್ಯಾಣ-ಕರ್ನಾಟಕ (ಹೈದ್ರಾಬಾದ್-ಕರ್ನಾಟಕ) ಸ್ಥಳೀಯ ವೃಂದದ ಕರಡು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ ದಿನಾಂಕ:18.10.2024 ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಮುಂದುವರೆದು, ತಹಶೀಲ್ದಾರ್ ಗ್ರೇಡ್-2 ಕಲ್ಯಾಣ-ಕರ್ನಾಟಕ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಶ್ರೀ ವಿನಯ ಕುಮಾರ್ ಪಾಟೀಲ್, ಕೆ.ಎ.ಎಸ್. (ಕಿ.ಶ್ರೇ.) ಮತ್ತು ಇತರರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:3826-3830/2025 ದಾಖಲಿಸಿದ್ದು, ಮಾನ್ಯ ನ್ಯಾಯ ಮಂಡಳಿಯು ದಿನಾಂಕ:25.08.2025ರ ಮಧ್ಯಂತರ ಆದೇಶದಲ್ಲಿ ತಡೆಯಾಜ್ಞೆ ನೀಡಲಾಗಿತ್ತು.

ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ ಹಾಗೂ ಆಕ್ಷೇಪಣಾ ಹೇಳಿಕೆಯನ್ನು ದಾಖಲಿಸಲಾಗಿರುತ್ತದೆ. ಪ್ರಕರಣದಲ್ಲಿ ತಡೆಯಾಜ್ಞೆ ತೆರವುಗೊಳ್ಳದ ಕಾರಣ, ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿನ ದಿನಾಂಕ:25.08.2025ರ ತಡೆಯಾಜ್ಞೆಯನ್ನು ಪ್ರಶ್ನಿಸಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:9737/2026 ನ್ನು ದಾಖಲಿಸಲಾಗಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:02.04.2026 ರ ಆದೇಶದಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಪ್ರಕರಣದ ವಿಚಾರಣೆಯನ್ನು ಕೈಗೊಂಡು ಆದೇಶವನ್ನು ಹೊರಡಿಸುವಂತೆ ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಕೆ.ಎ.ಟಿ. ಯಲ್ಲಿ ದಿನಾಂಕ: 28.04.2026, 02.06.2026

17.06.2026ರಂದು ವಿಚಾರಣೆ ನಡೆದಿದ್ದು, ಮುಂದಿನ ವಿಚಾರಣೆ ದಿನಾಂಕವನ್ನು 09.07.2026 ಕ್ಕೆ ನಿಗಧಿಪಡಿಸಿದ್ದು, ಮಾನ್ಯ ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ವಹಿಸಲಾಗುತ್ತಿದೆ.

ಕಂದಾಯ ಇಲಾಖೆಯ ತಹಶೀಲ್ದಾರ್ ಗ್ರೇಡ್-2 ಉಳಿಕೆ ಮೂಲ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:02.06.2026 ರಂದು ಪ್ರಕಟಿಸಲಾಗಿದ್ದು, ಉಳಿಕೆ ಮೂಲ ವೃಂದದ ತಹಶೀಲ್ದಾರ್ ಗ್ರೇಡ್-2 ವೃಂದದ 234 ಅಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಕಂಇ 279 ಎಎಸ್‌ಡಿ 2025 ದಿನಾಂಕ:17.06.2026ರಲ್ಲಿ ತಹಶೀಲ್ದಾರ್ ಗ್ರೇಡ್-1 ವೃಂದಕ್ಕೆ ಮುಂಬಡ್ತಿ ನೀಡಲಾಗಿದೆ. ಮುಂದುವರೆದು, ತಹಶೀಲ್ದಾರ್ ಗ್ರೇಡ್-2 ವೃಂದದ ಉಳಿಕೆ ಮೂಲ ವೃಂದದಲ್ಲಿ ಖಾಲಿ ಇರುವ 162 ಹುದ್ದೆಗಳನ್ನು ಉಳಿಕೆ ಮೂಲ ವೃಂದದ ಅರ್ಹ ಶಿರಸ್ತೇದಾರ ವೃಂದದ ನೌಕರರಿಗೆ ಸರ್ಕಾರದ ಆದೇಶ ಸಂಖ್ಯೆ ಕಂಇ 278 ಎಎಸ್‌ಡಿ 2025 ದಿನಾಂಕ:25.06.2026ರಲ್ಲಿ ತಹಶೀಲಾರ್ ಗ್ರೇಡ್-2 ವೃಂದಕ್ಕೆ ಮುಂಬಡ್ತಿ ನೀಡಲಾಗಿದೆ ಎಂಬ ಮಾಹಿತಿಯನ್ನು ಒದಗಿಸಲಾಗಿದೆ.

**ಇ-ಕಂಇ 220 ಎಎಸ್‌ಡಿ 2026**

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು